ಈಗಿನ ಪರಿಸ್ಥಿತಿಗಳನ್ನು ಗಮನಿಸಿದಾಗ, ಗುಲಾಬ ಮಕ್ಕಳೊಂದಿಗೆ ಬಾ ಅವರ ಬಳಿ ಅಹಮದಾಬಾದ್‌ನಲ್ಲಿಯೇ ಇರುವುದಾದರೆ ಬಾ ಅವರಿಗೂ ಸಂತೋಷವಾಗುವುದು.

ಅಲ್ಲದೆ...ಅಲ್ಲದೆ...ತಾನೂ ಸಹ ನಿಶ್ಚಿಂತೆಯಿಂದ ಇರಬಹುದು. ಈ ವಿಷಯಗಳ ಬಗ್ಗೆ ಹರಿಲಾಲ ಯೋಚಿಸುತ್ತಿದ್ದ. ಬಾಪೂ ಅಹಮದಾಬಾದ್‌ನ ಸಮೀಪದ ಕೋಚರಬ್ ಹಳ್ಳಿಯಲ್ಲಿ ಆಶ್ರಮವನ್ನು ಸ್ಥಾಪಿಸಿ ಅಲ್ಲಿರಲು ವ್ಯವಸ್ಥೆಯನ್ನು ಮಾಡುತ್ತಿದ್ದರು. ಆ ಆಶ್ರಮದಲ್ಲಿಯೂ ಬಾಪೂ ಅವರ ಚಟುವಟಿಕೆಗಳಿಗೆ ತಳಪಾಯವನ್ನು ಹಾಕಲಾಗುತ್ತಿತ್ತು, ಹೀಗಾಗಿ ಗುಲಾಬ ಮಕ್ಕಳೊಂದಿಗೆ ಹೋಗಿ ಕೆಲವು ದಿನ ಬಾ ಅವರ ಬಳಿಯೇ ಇದ್ದರೆ ಒಳಿತು; ಹರಿಲಾಲ ಈ ಸಾಧ್ಯತೆಯ ಬಗ್ಗೆಯೂ ಯೋಚಿಸುತ್ತಿದ್ದ. ಈ ನಡುವೆ ಸೋಲಾಪುರದಲ್ಲಿ ಅವನ ಊಟ ವಸತಿಗೆ ಸ್ಥಳ ಸಿಕ್ಕರೆ, ಅಲ್ಲಿ ಮನೆ ಮಾಡಿ ಗುಲಾಬಳನ್ನೂ ಕರೆಸಿಕೊಳ್ಳುತ್ತೇನೆ ಅಥವಾ ಸೇಠ್ ನರೋತ್ತಮದಾಸರು, ತನ್ನನ್ನು ಕಲ್ಕತ್ತಾದ ಮಿಲ್ಲಿನ ಕಚೇರಿಯನ್ನು ನೋಡಿಕೊಳ್ಳಲು ಅಲ್ಲಿಗೆ ಕಳುಹಿಸಿದರೆ, ಅಲ್ಲಿಯೇ ಮನೆಯನ್ನು ಬಾಡಿಗೆಗೆ ಹಿಡಿದು ತನ್ನ ಹೆಂಡತಿಮಕ್ಕಳನ್ನು ತನ್ನ ಬಳಿ ಇಟ್ಟುಕೊಳ್ಳುತ್ತೇನೆ ಎಂದೂ ಯೋಚಿಸಿದ. ಇದನ್ನೆಲ್ಲಾ ಯೋಚಿಸಿದ ನಂತರ ಅವನು ಗುಲಾಬಳಿಗೆ ವಿಷಯವನ್ನು ತಿಳಿಸಿದಾಗ ಅವಳು ಒಂದೇ ಮಾತನ್ನು ಹೇಳಿದಳು, "ನಿಮಗೆ ಯಾವುದು ಸರಿಯೆಂದು ತೋರುವುದೋ ಹಾಗೆಯೇ ಮಾಡಿ, ಆದರೆ ನೀವಿಲ್ಲದೆ ನನಗೆ ಸರಿ ಕಾಣುವುದಿಲ್ಲ.'

"ಗುಲಾಬ, ನಾನಿಲ್ಲದೆ ನಿನಗೆ ಸರಿ ಕಾಣದು ಎಂಬುದು ನನಗೆ ಗೊತ್ತಿದೆ' ಹರಿಲಾಲ ಪ್ರೀತಿಯಿಂದ ಹೇಳಿದ, 'ಒಂಟಿಯಾಗಿರುವುದು ನನಗಾದರೂ ಎಲ್ಲಿ ಇಷ್ಟವಾಗುವುದು?...ಆದರೆ ನನ್ನನ್ನು ನಂಬು, ಮನೆಯ ವ್ಯವಸ್ಥೆಯಾದ ಕೂಡಲೇ ನಾನು ನಿನ್ನನ್ನು ತಕ್ಷಣ ಕರೆಸಿಕೊಳ್ಳುತ್ತೇನೆ. ನೀನು ಬಾ ಅವರೊಂದಿಗೆ ಸುಖವಾಗಿರಬಹುದು.'

'ನೀವಿಲ್ಲದ ಸುಖ ನನಗೇಕೆ ಬೇಕು?' ಗುಲಾಬಳ ಧ್ವನಿಯಲ್ಲಿ ಹತಾಶ ಭಾವನೆಯಿತ್ತು.

'ಗುಲಾಬ, ನಿನಗೆ ಗೊತ್ತೇ ಇದೆ! ನಿನ್ನ ಸುಖವೇ ನನ್ನ ಸುಖ. ನಿನ್ನ ದುಃಖ ನನ್ನನ್ನು ತಿವಿಯುತ್ತದೆ. ನೀನು ಕೋಚರಬ್ ಆಶ್ರಮದಲ್ಲಿ ಬಾ ಅವರೊಂದಿಗೆ ಸುಖವಾಗಿಲ್ಲ ಎಂದು ನನಗೆ ಅನ್ನಿಸಿದ ಕೂಡಲೇ, ನಾನು ಆ ಕ್ಷಣವೇ ನಿನ್ನನ್ನು ಅಲ್ಲಿಂದ ಕರೆಸಿಕೊಳ್ಳುತ್ತೇನೆ. ನನ್ನನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ನೀನು ಇಲ್ಲಿಂದ ಪತ್ರವನ್ನು ಬರೆದರೆ, ನಾನು ಆ ಕಡೆಯಿಂದ ಬರುತ್ತೇನೆ. ಒಂದು ಕ್ಷಣವೂ ತಡ ಮಾಡುವುದಿಲ್ಲ, ನನ್ನನ್ನು ನಂಬು, ಗುಲಾಬ.'

ಪತಿಯ ಸ್ನೇಹದ ಮತ್ತು ಧೈರ್ಯದ ಮಾತುಗಳಿಗೆ ಗುಲಾಬ ಸಂತೋಷದಿಂದ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು. ಗಾಢವಾಗಿ ನಿದ್ರಿಸುತ್ತಿದ್ದ ಮಕ್ಕಳನ್ನು ಹರಿಲಾಲ ಒಮ್ಮೆ ನೋಡಿದ, ನಂತರ ಎಲ್ಲರ ತಲೆಯನ್ನು ಮೆಲ್ಲನೆ ನೇವರಿಸಿದ.

***

ಹರಿಲಾಲ ಸೋಲಾಪುರಕ್ಕೆ ಬಂದು ಕೆಲಸವನ್ನು ನಿರ್ವಹಿಸುತ್ತಾ ಕೆಲವೇ ದಿನಗಳು ಕಳೆದಿದ್ದವು, ಆಗಲೇ ಅದೊಂದು ದಿನ ಸೇಠ್ ನರೋತ್ತಮದಾಸರ ಸಂದೇಶ ಬಂತು

'ಹರಿಲಾಲ, ನೀನು ತಕ್ಷಣ ಕಲ್ಕತ್ತಾ ಕಚೇರಿಗೆ ಹೊರಡು.'

ಇನ್ನೂ ಹರಿಲಾಲ ಕೆಲಸವನ್ನು ಕಲಿಯಲು ಆರಂಭಿಸಿದ್ದ, ಇನ್ನೂ ಹೊಸ ನಗರದಲ್ಲಿ ಊಟವಸತಿಗೆ ಸರಿಯಾದ ವ್ಯವಸ್ಥೆಯನ್ನೂ ಮಾಡಿಕೊಂಡಿರಲಿಲ್ಲ, ಹಾಗಂತ ಹಣದ ಅಭಾವ ಈಗ ಅಷ್ಟಿರಲಿಲ್ಲ, ಅಲ್ಲದೆ ಪರಿವಾರದ ಬಗ್ಗೆಯೂ ಸ್ವಲ್ಪ ನಿಶ್ಚಿಂತನಾಗಿದ್ದ. ಹರಿಲಾಲ ಬಾಪೂ ಅವರಿಗೂ ಸಹ, ಈಗ ನಾನು ಕೆಲಸಕ್ಕೆ ಸೇರಿದ್ದೇನೆ; ಒಂದು ಕಡೆ ನೆಲೆಸಿದ್ದೇನೆ, ಕೆಲವೇ ದಿನಗಳಲ್ಲಿ ನಾನು ಕಲ್ಕತ್ತಾ ಕಚೇರಿಯನ್ನು ನೋಡಿಕೊಳ್ಳಲು ಹೋಗಬೇಕಿದೆ ಎಂದು ಒಂದು ಪತ್ರವನ್ನೂ ಬರೆದ. ಅಲ್ಲದೆ ಹರಿಲಾಲ ಬಾಪೂ ಅವರಿಗೆ, ಕಲ್ಕತ್ತಾದಲ್ಲಿ ಎಲ್ಲವೂ ಸರಿಯಾದ ನಂತರ ನಾನು ಕೋಚರಬ್ ಆಶ್ರಮದಿಂದ ಹೆಂಡತಿಮಕ್ಕಳನ್ನು ನನ್ನೊಂದಿಗಿರಲು ಕರೆತರುತ್ತೇನೆ ಎಂದೂ ಪತ್ರವನ್ನು ಬರೆದಿದ್ದ.

ಆದರೆ ಹರಿಲಾಲನಿಗೆ ಬಾಪೂ ಅವರಿಂದ ಬಂದ ಪತ್ರವನ್ನು ನೋಡಿ ಮನಸ್ಸಿಗೆ ದುಃಖವಾಯಿತು. ಅವನ ಹೊಸ ನೌಕರಿಯ ಬಗ್ಗೆ ಹಾಗೂ ಆ ನೌಕರಿಯಲ್ಲಿ ಯಶಸ್ಸು ಸಿಗಲಿ ಎಂದು ಬಾಪೂ ಬರೆದಿರಲಿಲ್ಲ. ಪ್ರತಿಯಾಗಿ, ಅವನು ಕಲ್ಕತ್ತಾದಲ್ಲಿ ಶಾಶ್ವತವಾಗಿ ನೆಲಸುವ ಬಗ್ಗೆ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿರಲಿಲ್ಲ. ಕಲ್ಕತ್ತಾದಲ್ಲಿ ಕಾಳಿ ಮಾತೆಯ ಮಂದಿರದಲ್ಲಿ ನಿತ್ಯ ಪಶುಬಲಿಯನ್ನು ಕೊಡಲಾಗುತ್ತಿತ್ತು, ನಿರ್ದೋಷ ಪಶುಗಳನ್ನು ಹಿಂಸಿಸುವ ಸ್ಥಳದಲ್ಲಿರುವುದು ಬಾಪೂ ಅವರಿಗೆ ಇಷ್ಟವಿರಲಿಲ್ಲ. ತಮ್ಮ ಅಸಂತುಷ್ಟತೆಯನ್ನು ವ್ಯಕ್ತಪಡಿಸುತ್ತಾ ಬಾಪೂ ಬರೆದರು 'ಹರಿ, ಅಂಥ ಹಿಂಸೆಯ, ದೂಷಿತ ಸ್ಥಳದಲ್ಲಿರುವ ಬಗ್ಗೆ ನಿನ್ನ ಯೋಚನೆಯನ್ನು ಬದಲಿಸು.'

ಆದರೆ ಹರಿಲಾಲ ಈಗ ಬಾಪೂ ಅವರ ಯಾವುದೇ ಸಲಹೆಯನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಬಾಪೂ ಇದಕ್ಕೊಪ್ಪದಿದ್ದದ್ದು ಅವರ ಬುದ್ಧಿವಂತಿಕೆ ಅಲ್ಲ ಎಂದು ಹರಿಲಾಲನಿಗೆ ಅನ್ನಿಸಿತು. ಒಂದು ವೇಳೆ ಬಾಪೂ ಅವರ ಮಾತನ್ನು ಒಪ್ಪಿದರೆ ಕಲ್ಕತ್ತಾದಲ್ಲಿ ವಾಸಿಸುವ ಲಕ್ಷಾಂತರ ಜನ ನಗರವನ್ನೇ ತ್ಯಜಿಸಬೇಕಾಗುವುದು. ಹರಿಲಾಲ ಬಾಪೂ ಅವರ ಪತ್ರಕ್ಕೆ ಉತ್ತರಿಸಲಿಲ್ಲ. ಅವನು ಕಲ್ಕತ್ತೆಗೆ ಹೋಗುವ ತನ್ನ ನಿರ್ಧಾರವನ್ನು ಗಟ್ಟಿ ಮಾಡಿಕೊಂಡ.

ಮೊದಲ ನೋಟದಲ್ಲಿಯೇ ಹರಿಲಾಲನಿಗೆ ಕಲ್ಕತ್ತಾ ಇಷ್ಟವಾಯಿತು. ಕಚೇರಿಯ ಕೆಲಸ ಕಾರ್ಯಗಳಲ್ಲಿ ಸಹ ಅವನಿಗೆ ಆಸಕ್ತಿ ಹುಟ್ಟಿತ್ತು. ತಾನು ಮೊದಲ ಬಾರಿಗೆ ಆರ್ಥಿಕವಾಗಿ ಸ್ವತಂತ್ರನಾದ ಬಗ್ಗೆ ಅವನಿಗೆ ಸಂತೋಷವಾಗಿತ್ತು. ವೇತನ ಕಡಿಮೆಯಿದ್ದಾಗ್ಯೂ, ಬಂದ ವೇತನದಲ್ಲಿ ಅವನು ತನ್ನ ಪರಿವಾರದೊಂದಿಗೆ ಸುಖವಾಗಿರಬಹುದಿತ್ತು. ಹರಿಲಾಲನ ಮನಸ್ಸಿನಲ್ಲಿ, ಒಂದು ವೇಳೆ ಕೆಲಸಕಾರ್ಯಗಳಲ್ಲಿ ತಾನು ಅಲ್ಪಸ್ವಲ್ಪ ಬುದ್ಧಿಯನ್ನು ಓಡಿಸಿದರೆ, ಸಮಯ ಕಳೆದಂತೆ, ಭವಿಷ್ಯದಲ್ಲಿ ತಾನು ತನ್ನದೇ ಆದ ಸ್ವಂತ ವ್ಯಾಪಾರವನ್ನು ಮಾಡಿ ಬೇಕಾದಷ್ಟು ಹಣವನ್ನು ಸಂಪಾದನೆ ಮಾಡಬಹುದು ಎಂಬ ವಿಚಾರ ಮನೆ ಮಾಡುತ್ತಿತ್ತು. ದೇಶದ ಜವಳಿ ಉದ್ಯಮದ ತತ್ಕಾಲದ ಪರಿಸ್ಥಿತಿಯನ್ನು ಗಮನಿಸಿದಾಗ ಹರಿಲಾಲನ ಈ ಯೋಚನೆಯಲ್ಲಿ ಹುರುಳಿತ್ತು.

ಹರಿಲಾಲನ ಅದೃಷ್ಟ ಚೆನ್ನಾಗಿತ್ತು, ಅವನಿಗೆ ಕಲ್ಕತ್ತಾದಲ್ಲಿ ವಾಸಿಸಲು ಇಷ್ಟವಾದ ಮನೆ ಸಿಕ್ಕಿತು. ಅಷ್ಟು ವರ್ಷ ಒಂಟಿಯಾಗಿದ್ದು ಬೇಸರಗೊಂಡಿದ್ದ. ಈಗಲೂ ಅವನು ಅಹಮದಾಬಾದ್‌ನಲ್ಲಿ ಕಳೆದ ದಿನಗಳನ್ನು ಮರೆತಿರಲಿಲ್ಲ. ಕಲ್ಕತ್ತಾ ನಿಶ್ಚಿತವಾಗಿಯೂ ಅಪರಿಚಿತ ನಗರವಾಗಿತ್ತು. ಕಲ್ಕತ್ತಾದಲ್ಲಿ ಅವನು ಮಕ್ಕಳಿಲ್ಲದೆ ಜೀವನವನ್ನು ಕಳೆಯುತ್ತಿದ್ದ, ಆಗ ಅವನಿಗೆ ತಾನು ದಿನೇದಿನೇ ಹುಚ್ಚನಾಗುತ್ತಿದ್ದೇನೆ ಎಂದು ಅನ್ನಿಸುತ್ತಿತ್ತು. ಕಚೇರಿಯ ಸ್ನೇಹಿತರು ಸಂಜೆಯಾಗುತ್ತಲೇ ಅಗ್ಗದ ಶರಾಬು ಅಂಗಡಿಗೆ ಹೋಗಿ ಸರಾಯಿಯನ್ನು ಕುಡಿಯುತ್ತಿದ್ದರು ಅಥವಾ ರಾತ್ರಿಯ ವೇಳೆಯಲ್ಲಿ ಸೋನಾಗಾಛಿ ಪ್ರದೇಶಕ್ಕೆ ಹೋಗಿ ನೃತ್ಯಶಾಲೆಗಳಲ್ಲಿ ರಾತ್ರಿಯನ್ನು ಕಳೆಯುತ್ತಿದ್ದರು, ಆ ವೇಳೆಯಲ್ಲಿ ಹರಿಲಾಲ ಅಸಹಾಯಕತೆಯಿಂದ ತನ್ನನ್ನು ತಾನು ಹತ್ತಿಕ್ಕಿಕೊಂಡು ತನ್ನ ಕೋಣೆಗೆ ಹೋಗುತ್ತಿದ್ದ. ಆಫ್ರಿಕಾದಲ್ಲಿ ಮನೆಯನ್ನು ಬಿಡುವಾಗ ಭಗವದ್ಗೀತೆಯ ಪ್ರತಿಯನ್ನು ತನ್ನೊಂದಿಗೆ ತಂದಿದ್ದ, ಅದು ಈಗಲೂ ಸಹ ಅವನ ಬಳಿ ಇತ್ತು. ಒಮ್ಮೊಮ್ಮೆ ಹರಿಲಾಲ ಈ ಗ್ರಂಥದ ಶಬ್ದಗಳಿಂದ ನೆಮ್ಮದಿಯನ್ನರಸಲು ಪ್ರಯತ್ನಿಸುತ್ತಿದ್ದ.

ತಾನು ಇನ್ನು ಕೆಲವು ತಿಂಗಳು ಒಂಟಿಯಾಗಿರುವುದಾಗಿ ಮೊದಲು ಹರಿಲಾಲ ಯೋಚಿಸಿದ, ಹೀಗೆ ಮಿತವ್ಯಯದಿಂದ ಸ್ವಲ್ಪ ಹಣವನ್ನು ಉಳಿಸಿ ಮನೆ ಮಾಡಲು ಅಗತ್ಯ ವಸ್ತುಗಳನ್ನು ಖರೀದಿಸಬಹುದು, ಮನೆಯನ್ನು ಸಂಪೂರ್ಣವಾಗಿ ಸಜ್ಜುಗೊಳಿಸಿದ ನಂತರವೇ ಹೆಂಡತಿಮಕ್ಕಳನ್ನು ಕರೆಸಿಕೊಳ್ಳಬಹುದು ಎಂದೂ ಯೋಚಿಸಿದ. ಆದರೆ ದಿನ ಕಳೆದಂತೆ ಅವನು ತನ್ನ ಈ ತೀರ್ಮಾನದ ಬಗ್ಗೆ ಆಸಕ್ತಿಯನ್ನು ಕಳೆದುಕೊಳ್ಳಲಾರಂಭಿಸಿದ. ಅವನ ಮನಸ್ಸು ಚಂಚಲಗೊಳ್ಳುತ್ತಿತ್ತು. ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿದ್ದಾಗ ಸಮಯ ಸುಲಭವಾಗಿ ಕಳೆಯುತ್ತಿತ್ತು, ಆದರೆ ಸಂಜೆಯಾಗುತ್ತಲೇ ಹರಿಲಾಲ ವ್ಯಗ್ರನಾಗುತ್ತಿದ್ದ. ಬಣ್ಣಬಣ್ಣದ ರಾತ್ರಿಗಳು ಮತ್ತು ರಾತ್ರಿಯ ಒಂಟಿತನ ಅವನನ್ನು ಚೂರುಚೂರು ಮಾಡುತ್ತಿದ್ದವು.

ಗುಲಾಬಳ ಪತ್ರ ಕ್ರಮಬದ್ಧವಾಗಿ ಬರುತ್ತಿತ್ತು, ಅವನು ಆ ಪತ್ರಗಳಿಗೆ ಉತ್ತರವನ್ನೂ ಬರೆಯುತ್ತಿದ್ದ, ಇನ್ನೂ ಹಲವು ದಿನಗಳು ಕಾಯುವುದಕ್ಕೆ ಬದಲು ತಕ್ಷಣ ತನ್ನ ಪಾರಿವಾರಿಕ ಜೀವನವನ್ನು ಆರಂಭಿಸಬೇಕು ಎಂದು ಮನಸ್ಸು ಬಯಸುತ್ತಿತ್ತು. ಅದಕ್ಕಾಗಿ ಮನೆಗೆ ಬೇಕಾದ ಸಾಮಾನುಗಳನ್ನು ಖರೀದಿಸಲು ಹಣದ ಅಡಚಣೆಯಾಗಬಹುದು, ಆದರೆ ಅದಕ್ಕೂ ಒಂದಲ್ಲ ಒಂದು ಮಾರ್ಗ